I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 10 × 1 = 10

1. ಭಾರತದ ಉಕ್ಕಿನ ಮನುಷ್ಯ

   (A) ಮಹಾತ್ಮ ಗಾಂಧೀಜಿ

   (B) ಡಾ. ಬಿ.ಆರ್. ಅಂಬೇಡ್ಕರ್

   (C) ಸರ್ದಾರ್ ವಲ್ಲಭಬಾಯಿ ಪಟೇಲ್

   (D) ಜವಹರಲಾಲ್ ನೆಹರು

2. ಸ್ವಾತಂತ್ರ್ಯ ನಂತರವೂ ಪೋರ್ಚುಗೀಸರ ವಸಾಹತು ಕೇಂದ್ರವಾಗಿ ಉಳಿದ ಪ್ರಾಂತ್ಯ

   (A) ಪಾಂಡಿಚೇರಿ

   (B) ಗೋವಾ

   (C) ಕಾರೈಕಲ್

   (D) ಮಾಹೆ

3. ಭಾರತ–ಶ್ರೀಲಂಕಾ ಬಾಂಧವ್ಯ ಐತಿಹಾಸಿಕವಾದುದು. ಈ ಹೇಳಿಕೆಯನ್ನು ಪುಷ್ಟೀಕರಿಸುವ ಅಂಶ

   (A) ಭಾರತ ಈ ದೇಶದೊಂದಿಗೆ ಉತ್ತಮ ವ್ಯಾಪಾರ ಸಂಬಂಧ ಹೊಂದಿದೆ

   (B) ಭಾರತ ಎಲ್.ಟಿ.ಟಿ.ಇ.ರವರನ್ನು ಹಿಮ್ಮೆಟ್ಟಿಸುವಲ್ಲಿ ಮಿಲಿಟರಿ ಸಹಾಯ ನೀಡಿದೆ

   (C) ಬೌದ್ಧ ಧರ್ಮ ಭಾರತೀಯ ಭಿಕ್ಷುಗಳಿಂದ ಶ್ರೀಲಂಕಾದಲ್ಲಿ ಪಸರಿಸಲ್ಪಟ್ಟಿತು

   (D) ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿ ಭಾರತ ಶ್ರೀಲಂಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ

4. ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿಯವರ ಅಧಿಕಾರದ ಅವಧಿ

(A) 3 ವರ್ಷಗಳು

(B) 4 ವರ್ಷಗಳು

(C) 5 ವರ್ಷಗಳು

(D) 6 ವರ್ಷಗಳು

5. ಸಾಮಾಜಿಕ ಸಾಮರಸ್ಯಕ್ಕೆ ಸಹಾಯಕವಾಗುವ ಅಂಶ

(A) ಕೋಮುವಾದ

(B) ವರ್ಣಭೇದ ನೀತಿ

(C) ಜಾತಿವಾದ

(D) ಶಿಕ್ಷಣ

6. ಈಶಾನ್ಯ ಮಾನ್ಸೂನ್ ಮಾರುತಗಳ ಕಾಲವನ್ನು 'ನಿರ್ಗಮನ ಕಾಲ' ಎಂದು ಕರೆಯಲು ಕಾರಣ

(A) ನೈರುತ್ಯ ಮಾನ್ಸೂನ್ ಮಾರುತಗಳು ಹೆಚ್ಚು ಒತ್ತಡದಿಂದಾಗಿ ಅಕ್ಟೋಬರ್ ತಿಂಗಳಿನಿಂದ ಹಿಮ್ಮೆಟ್ಟಲು ಪ್ರಾರಂಭ ಮಾಡುತ್ತದೆ

(B) ನವೆಂಬರ್ ತಿಂಗಳ ಅಂತ್ಯದ ವೇಳೆಗೆ ಮಾರುತಗಳು ಬೀಸುವುದನ್ನು ನಿಲ್ಲಿಸುತ್ತದೆ

(C) ಅಕ್ಟೋಬರ್ ತಿಂಗಳಲ್ಲಿ ಭಾರತದ ಉಪಖಂಡಗಳಲ್ಲಿ ಮಳೆ ಸುರಿದು ಉಷ್ಣಾಂಶ ಕಡಿಮೆಯಾಗುತ್ತದೆ

(D) ಸೂರ್ಯನ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಲಂಬವಾಗಿ ಬೀಳುತ್ತದೆ

7. ಭಾರತದಲ್ಲಿಯೇ ಅತ್ಯಂತ ದೊಡ್ಡದಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ

(A) ಭಾಕ್ರಾ–ನಂಗಲ್

(B) ಕೋಸಿ

(C) ದಾಮೋದರ

(D) ಹಿರಾಕುಡ್

8. ವಿತ್ತೀಯ ಕೊರತೆಗೆ ಕಾರಣ

(A) ಹೂಡಿಕೆ ಹಿಂತೆಗೆತ

(B) ಸರ್ಕಾರದ ಸಾಲ ಮರುಪಾವತಿ

(C) ಸರ್ಕಾರದ ಒಟ್ಟು ವೆಚ್ಚ ಹೆಚ್ಚು

(D) ಸರ್ಕಾರದ ಆದಾಯ ಹೆಚ್ಚು

9. ಚಾಲ್ತಿ ಖಾತೆ ವ್ಯಾಪಾರಸ್ಥರಿಗೆ ಸೂಕ್ತ, ಕಾರಣ

(A) ಈ ಖಾತೆಗೆ ಬ್ಯಾಂಕ್ ಬಡ್ಡಿ ಕೊಡುವುದಿಲ್ಲ

(B) ಇಲ್ಲಿ ಮಿತ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ ವ್ಯವಹಾರ ಸಾಧ್ಯ

(C) ಬ್ಯಾಂಕ್ ಈ ಖಾತೆಗೆ ಸೇವಾ ಶುಲ್ಕ ವಸೂಲಿ ಮಾಡುತ್ತದೆ

(D) ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು, ಹಿಂಪಡೆಯಬಹುದು

10. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆಯ ಉದ್ದೇಶ

(A) ಸ್ವಯಂ ಉದ್ಯೋಗ ಪ್ರೋತ್ಸಾಹಿಸಲು

(B) ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು

(C) ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳ ಆಡಳಿತ ಮತ್ತು ಸಮಗ್ರತೆಯನ್ನು ಕೇಂದ್ರೀಕರಿಸಲು

(D) ನಗರ ಪ್ರದೇಶಗಳಲ್ಲಿನ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. 1453 ರಲ್ಲಿ ಕಾನ್‌ಸ್ಟ್ಯಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು

   (A) ಅರಬ್ಬರು

   (B) ಅಟೋಮನ್ ಟರ್ಕರು

   (C) ಇಟಲಿಯನ್ನರು

   (D) ಪೋರ್ಚುಗೀಸರು

2. ಕ್ವಿಟ್ ಇಂಡಿಯಾ ಚಳುವಳಿಯು ಕಾಂಗ್ರೆಸ್ಸೇತರ ನಾಯಕರಿಗೆ ನಾಯಕತ್ವವನ್ನು ನೀಡಿತು.

   ಈ ಕೆಳಗಿನವರಲ್ಲಿ ಕಾಂಗ್ರೆಸ್ಸೇತರ ನಾಯಕರನ್ನು ಗುರುತಿಸಿ :

   (A) ಕಸ್ತೂರ್‌ಬಾ ಗಾಂಧಿ

   (B) ಡಾ. ಬಿ.ಆರ್. ಅಂಬೇಡ್ಕರ್

   (C) ಜಯಪ್ರಕಾಶ್ ನಾರಾಯಣ್

   (D) ಮೌಲಾನಾ ಅಬ್ದುಲ್ ಕಲಾಂ ಆಜಾದ್

3. ಪಂಚಶೀಲ ತತ್ವಗಳಿಗೆ ಚೀನಾದ ಪ್ರಧಾನಿ ಚೌ.ಎನ್. ಲಾಯ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿದ ಭಾರತದ ಪ್ರಧಾನಿ

   (A) ಜವಾಹರಲಾಲ್ ನೆಹರು

   (B) ಲಾಲ್ ಬಹಾದ್ದೂರ್ ಶಾಸ್ತ್ರಿ

   (C) ಇಂದಿರಾ ಗಾಂಧಿ

   (D) ಅಟಲ್ ಬಿಹಾರಿ ವಾಜಪೇಯಿ

4. ಬಾಲಕಿಯರ ಸಬಲೀಕರಣಕ್ಕಾಗಿ "ಬಾಲಿಕಾ ಸಂಘ"ಗಳನ್ನು ಸ್ಥಾಪಿಸಿ, ನಿರ್ವಹಿಸಬೇಕಾದವರು

(A) ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ

(B) ಮಕ್ಕಳ ಗ್ರಾಮ ಸಭೆ

(C) ಮಕ್ಕಳ ಸುರಕ್ಷತಾ ಸಮಿತಿ

(D) ಅಂಗನವಾಡಿಗಳು

5. ಕಾರ್ಗಿಲ್ ಸಮೀಪದ ಡ್ರಾಸ್‌ನಲ್ಲಿ ಅತೀ ಕಡಿಮೆ ಉಷ್ಣಾಂಶವು ದಾಖಲಾಗಿದೆ. ಏಕೆಂದರೆ ಇದು

(A) ಸೂರ್ಯನ ನೇರವಾದ ಕಿರಣಗಳನ್ನು ಪಡೆಯುತ್ತದೆ

(B) ಸಮುದ್ರಕ್ಕೆ ಹತ್ತಿರದಲ್ಲಿದೆ

(C) ಅತೀ ಎತ್ತರದ ಪ್ರದೇಶದಲ್ಲಿದೆ

(D) ನೈರುತ್ಯ ಮಾನ್ಸೂನ್ ಮಾರುತಗಳ ಪ್ರಭಾವಕ್ಕೆ ಒಳಪಟ್ಟಿದೆ

6. ನಮ್ಮ ಸಂವಿಧಾನದ 21ನೇ ವಿಧಿಯು ತಿಳಿಸುವುದೇನೆಂದರೆ

(A) ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ ನೀಡುವುದು ಸರ್ಕಾರಗಳ ಜವಾಬ್ದಾರಿ

(B) ಅಲ್ಪ ಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡುವುದು

(C) ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿಗೆ ಅವಕಾಶಗಳನ್ನು ನೀಡುವುದು ರಾಜ್ಯ ಸರ್ಕಾರಗಳ ಕರ್ತವ್ಯ

(D) ಶಿಕ್ಷಣವು ಮಕ್ಕಳ ಮೂಲಭೂತ ಹಕ್ಕು ಎಂದು ಘೋಷಿಸುವುದು

7. ಈ ಕೆಳಗಿನವುಗಳಲ್ಲಿ ಸರ್ಕಾರದ ತೆರಿಗೆಯೇತರ ವರಮಾನ ಆಗಿರುವುದು

(A) ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ.)

(B) ವಿವಿಧ ರೀತಿಯ ದಂಡಗಳು

(C) ಆಮದು ರಫ್ತು ಸುಂಕ

(D) ಸ್ಟ್ಯಾಂಪ್ ಶುಲ್ಕ

8. 'ಬಿಳಿಕ್ರಾಂತಿಯ ಪಿತಾಮಹ' ಎಂದು ಪ್ರಖ್ಯಾತರಾದ ಉದ್ಯಮಿ

(A) ಡಾ. ಪ್ರತಾಪ್ ರೆಡ್ಡಿ

(B) ನರೇಶ್ ಗೋಯಲ್

(C) ವರ್ಗೀಸ್ ಕುರಿಯನ್

(D) ಕಿರಣ್ ಮುಜಮ್‌ದಾರ್ ಷಾ